# ತಬಲಾ ರಾಜಕುಮಾರಿ!

**ತಬಲಾ ಮಾಂತ್ರಿಕ ಜಾಕೀರ್ ಹುಸೇನ್ ಅವರಿಂದ 'ಸರಸ್ವತಿಯ ಪ್ರತಿರೂಪ' ಎಂದು ಹೊಗಳಿಸಿಕೊಂಡಿರುವ ರಿಂಪಾ ಶಿವ ಸಂಗೀತ ಲೋಕದ ಅತಿ ಅಪರೂಪದ ಸಾಧಕಿ. ಕಿರಿಯ ವಯಸ್ಸಿನಲ್ಲೇ ಅಸಾಧಾರಣ ಸಾಧನೆ ಮೆರೆದಿರುವ ರಿಂಪಾ, ನಾದಲೀಲೆಗೆ ಮರುಳಾಗಿರುವ ಯುವ ತಲೆಮಾರಿನ ಐಕಾನ್.**

**ಉಮಾ ಅನಂತ್**



ಬಹುಶಃ ಇದು ಮಣ್ಣಿನ ಗುಣ ಇರಬೇಕು. ಕೋಲ್ಕತ್ತಾದ ಮಣ್ಣಿನಲ್ಲಂತೂ ಸಂಗೀತದ ಘಮಲು ಹುಲುಸಾಗಿಯೇ ಇದೆ. ಹಿಂದೂಸ್ತಾನಿ ಸಂಗೀತಕ್ಕೆ ಅತ್ಯುತ್ತಮ ಕೊಡುಗೆ ನೀಡುತ್ತಿರುವವರಲ್ಲಿ ಅನೇಕ ಕಲಾವಿದರು ಹುಟ್ಟಿ ನೆಲೆಸಿರುವುದು ಕೋಲ್ಕತ್ತಾದಲ್ಲೇ. ಹಿರಿಯ ವಿದ್ವಾಂಸರ ಜೊತೆಗೆ ಯುವ ಪ್ರತಿಭಾನ್ವಿತರ ನೆಲೆವೀಡು ಕೋಲ್ಕತ್ತಾ ಎಂಬುದು ವಿಶೇಷ.

'ಚೈಲ್ಡ್ ಪ್ರಾಡಿಜಿ' ಎನಿಸಿರುವ ಯುವ ತಬಲಾ ವಾದಕಿ ರಿಂಪಾ ಶಿವ ಮೇಲಿನ ಮಾತಿಗೆ ತಾಜಾ ಉದಾಹರಣೆ. ಈಕೆಯ ಪುಟ್ಟ ಬೆರಳುಗಳು ಅವನದ್ಧ ವಾದ್ಯ ತಬಲಾ–ಡಗ್ಗಾಗಳ ಮೇಲೆ ನರ್ತಿಸುವುದನ್ನು ನೋಡುವುದೇ ಕಣ್ಣಿಗೊಂದು ಹಬ್ಬ. ವಿಶ್ವವಿಖ್ಯಾತ ತಬಲಾ ಮಾಂತ್ರಿಕ ಜಾಕೀರ್ ಹುಸೇನ್ ಈ ಯುವ ವಾದಕಿಯ ತಬಲಾ ಬೋಲ್‌ಗಳನ್ನು ಆಲಿಸಿ ಉದ್ಗಾರವೆತ್ತಿದ್ದು, 'ರಿಂಪಾ ಶಿವ ಸರಸ್ವತಿಯ ಪ್ರತಿರೂಪ!' **(Rimpa Shiva is simply a incarnation of Ma Saraswati)** ಎಂದು. ಅಷ್ಟೇ ಅಲ್ಲ ಫ್ರಾನ್ಸ್‌ನಲ್ಲಿ ರಿಂಪಾ ನುಡಿಸಿದ ತಬಲಾ ಸೋಲೊ ಕೇಳಿ ಅಲ್ಲಿನ ಸರ್ಕಾರ ಈ ಕಲಾವಿದೆ ಬಗ್ಗೆಯೇ ಸಾಕ್ಷ್ಯಚಿತ್ರವೊಂದನ್ನು ನಿರ್ಮಿಸಿದೆ. ಇದರ ಶೀರ್ಷಿಕೆ.. 'ರಿಂಪಾ ಶಿವ: ಪ್ರಿನ್ಸೆಸ್ ಆಫ್ ತಬಲಾ!'

ಸದಾ ತಬಲಾ ಕಛೇರಿಗಳಲ್ಲೇ ಬ್ಯುಸಿಯಾಗಿರುತ್ತಿದ್ದ ರಿಂಪಾ, ಲಾಕ್‌ಡೌನ್‌ನಿಂದಾಗಿ ದೇಶ ವಿದೇಶ ಸುತ್ತಲಾಗದೆ ತನ್ನದೇ ಆದ 'ಬಂದೀಶ್ ತಬಲಾ ಅಕಾಡೆಮಿ'ಯ ವಿವಿಧ ಚಟುವಟಿಕೆ ಹಾಗೂ ಆನ್‌ಲೈನ್ ಸಂಗೀತ ಕಾರ್ಯಗಳಲ್ಲಿ ಬ್ಯುಸಿಯಾಗಿದ್ದಾರೆ.

ಕಿರಿಯ ವಯಸ್ಸಿನಲ್ಲೇ (ಹುಟ್ಟಿದ್ದು ಜನವರಿ 1, 1986) ದೊಡ್ಡ ಸಾಧನೆ ಮಾಡಿ ವಿಶ್ವದಾದ್ಯಂತ ಗುರುತಿಸಿಕೊಂಡ ರಿಂಪಾ ಶಿವ ತನ್ನ ಸಾಧನೆಯ ಹಾದಿಯನ್ನು 'ಸುಧಾ'ದೊಂದಿಗೆ ಹಂಚಿಕೊಂಡಿದ್ದು, ತಬಲಾ ವಾದನದ ಹೆಜ್ಜೆಗುರುತುಗಳನ್ನು ಅವರದೇ ಮಾತಿನಲ್ಲಿ ಕೇಳಿ...

ನಾನು ಮೂರು ವರ್ಷ ಮಗುವಾಗಿರುವಾಗಲೇ ತಬಲಾ ತರಂಗಗಳ ಸುನಾದಕ್ಕೆ ಮನಸೋತಿದ್ದೆ. ತಂದೆ ಸ್ವಪ್ನನ್ ಶಿವ ತಬಲಾ ವಾದಕರು. ಮನೆಯಲ್ಲಿ ನಿತ್ಯವೂ ತಬಲಾದಲ್ಲಿ ತೀನ್‌ತಾಲ್, ಜಪ್‌ತಾಲ್, ರೂಪಕ್‌ತಾಲ್ ಮುಂತಾದವುಗಳ ಲಯ ಮೊಳಗುತ್ತಿದ್ದರೆ, ಈ ವಾದನದ ವಿವಿಧ ಭಾಗಗಳಾದ ತುಕುಡಾ, ಮುಕುಡಾ, ಠೇಕಾ, ರೇಲಾ, ಪೇಶ್‌ಕಾರ್, ಕಾಯ್ದಾಗಳು ನನ್ನನ್ನೂ ಮಂತ್ರಮುಗ್ಧಗೊಳಿಸುತ್ತಿದ್ದವು. ದಿನಾ ಅಪ್ಪ ಬೇರೆ ಮಕ್ಕಳಿಗೆ ಹೇಳಿಕೊಡುತ್ತಿರುವಾಗ ನನಗೂ ಇದನ್ನೇ ಕಲಿಯಬೇಕೆನಿಸಿತ್ತು. ಇದು ಪುರುಷ ಕಲಾವಿದರಿಗೆ ಸೀಮಿತ ಎಂಬ ಅಲಿಖಿತ ನಿಯಮ ಎಲ್ಲೆಡೆ ಇದ್ದ ಕಾರಣವೋ ಏನೊ ಅಪ್ಪ ನನಗೆ 'ನೀನು ಸಿತಾರ್ ಕಲಿ ಮಗಳೇ' ಎಂದು ಸಲಹೆ ಮಾಡಿದರು. ಆದರೆ ನನ್ನ ಬೆರಳುಗಳು ಸಿತಾರ್ ತಂತಿ ಮೀಟಲೇ ಇಲ್ಲ, ಬದಲಾಗಿ ತಬಲಾ ಡಗ್ಗಾಗಳ ಮೇಲೆ ಲಯಬದ್ಧವಾಗಿ ನರ್ತಿಸತೊಡಗಿದವು. ಇದನ್ನು ಕಂಡ ಅಪ್ಪನಿಗೆ ಏನನ್ನಿಸಿತೋ ಅಂದೇ ಮ್ಯೂಸಿಕಲ್ ಶಾಪ್‌ಗೆ ಹೋಗಿ ನನಗಾಗಿಯೇ ಹೊಸ ತಬಲಾ ಸೆಟ್ ತಂದು ತಮ್ಮ ಶಿಷ್ಯೆಯನ್ನಾಗಿ ಮಾಡಿಕೊಂಡರು. ಅಂದಿನಿಂದ ನಾನು ತಬಲಾ ಬಿಟ್ಟು ಬೇರೇನನ್ನೂ ನುಡಿಸಲೂ ಇಲ್ಲ. ಇದೇ ನನ್ನ ಧ್ಯಾನ, ತಬಲಾವೇ ನನ್ನ ತಪಸ್ಸು ಎನ್ನುವಷ್ಟು ಅದರೊಂದಿಗೆ ಆಪ್ತವಾಗಿ ಬಿಟ್ಟೆ.

ಅಭಿರುಚಿ, ಆಸಕ್ತಿ ಎರಡೂ ತಬಲಾ ಮೇಲೇ ಇದ್ದ ಕಾರಣ ಈ ವಾದನದ ತಂತ್ರಗಾರಿಕೆ, ಲಯಕಾರಿ ಅಂಶಗಳನ್ನು ಬಹುಬೇಗನೆ ಕರಗತ ಮಾಡಿಕೊಂಡೆ. ಫರೂಕಾಬಾದ್ ಘರಾಣೆಯಲ್ಲಿ ಅಭ್ಯಾಸ ಮುಂದುವರಿಸಿದೆ. ಏಳು ವರ್ಷ ಇರುವಾಗಲೇ ಪಂ. ಅಜಯ್ ಚಕ್ರವರ್ತಿ ಅವರು ಐಟಿಸಿ ಸಂಗೀತ ರಿಸರ್ಚ್ ಅಕಾಡೆಮಿ ವತಿಯಿಂದ ಮೊದಲ ಸೋಲೊ ಕಛೇರಿಯನ್ನು ಕೋಲ್ಕತ್ತಾದಲ್ಲೇ ಆಯೋಜಿಸಿದರು. ಜೊತೆಗೆ ಅಜಯ್ ಚಕ್ರವರ್ತಿ ಅವರ ಗಾಯನಕ್ಕೆ ಸಾಥಿಯನ್ನೂ ನೀಡಿದೆ. ಮುಂದೆ ದೆಹಲಿ, ಜೈಪುರ, ಮುಂಬಯಿಗಳಲ್ಲಿಯೂ ಕಛೇರಿ ನೀಡಿದೆ. ಅಹಮದಾಬಾದ್‌ನಲ್ಲಿ ದೇಶದ ಪ್ರತಿಷ್ಠಿತ 'ಸಪ್ತಕ' ಸಂಗೀತೋತ್ಸವ ನಡೆಯುತ್ತದೆ. ನಿಪುಣ